ಮಾನ್ಯ ಅಧ್ಯಕ್ಷರೆ, ತಾವು ಮಾನ್ಯ ಮಂತ್ರಿಗಳಿಗೆ ಹೇಳಿಕೆಯನ್ನು ಕನ್ನಡದಲ್ಲಿ ಓದುವುದಕ್ಕೆ ಹೇಳಬೇಕು.

ಶ್ರೀ ಬಿ. ಎಂ. ಇದಿನಬ್ಬ : ಇನ್ನು ಮುಂದೆ ಕನ್ನಡದಲ್ಲಿ ಬರುತ್ತದೆ.

ಶ್ರೀ ಬಸವರಾಜರಾಯರೆಡ್ಡಿ : ಕನ್ನಡವನ್ನು ಆಡಳಿತದ ಎಲ್ಲಾ ಹಂತಗಳಲ್ಲಿ ಬಳಕೆಗೆ ತರಲಾಗುವುದೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಮಗೂ ಇಂಗ್ಲೀಷ್ ಬರುವುದಿಲ್ಲವೆಂದಲ್ಲ. ಕರ್ನಾಟಕದಲ್ಲಿ ಕನ್ನಡವನ್ನು ಜಾರಿಗೆ ತರುತ್ತೇವೆಂದು ಹೇಳಿ ಮತ್ತೆ ಸದನದಲ್ಲಿ ಇಂಗ್ಲೀಷಿನಲ್ಲಿ ಉತ್ತರ ಕೊಡುತ್ತಿದ್ದಾರೆ.

(ಗೊಂದಲ)

<u>ತೀರ್ಥಪುರ ಆಸ್ಪತ್ರೆಯ ವೈದ್ಯಾಧಿಕಾರಿಯ ಗೈರು ಹಾಜರಿ</u>

ಶ್ರೀ ಜೆ. ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ , ಚಿಕ್ಕನಾಯಕನಹಳ್ಳಿಯ ತೀರ್ಥಪುರ ಆಸ್ಪತ್ರೆಗೆ ಸುಮಾರು 6 ವರ್ಷಗಳಿಂದ ವೈದ್ಯಾಧಿಕಾರಿಗಳನ್ನು ಹಾಕದೆ ನಾನು ಒತ್ತಾಯ ಮಾಡಿದಾಗ ಒಬ್ಬ ವೈದ್ಯಾಧಿಕಾರಿಯನ್ನು ನೇಮಿಸಿದ್ದು, ಅವರು ಒಂದು ದಿನವೂ ಆಸ್ಪತ್ರೆಗೆ ಬಂದಿರುವುದಿಲ್ಲ. ಸದರಿ ಅಧಿಕಾರಿಯು ಆಯ್ಕೆಯಾದ ಮೂರು ವರ್ಷಗಳ ಕಾಲ ಎಲ್ಲಿಯೂ ಕೆಲಸ ಮಾಡಿರುವುದಿಲ್ಲ, ವಜಾ ಆಗಬಹುದೆಂಬ ಒಂದೇ ಕಾರಣಕ್ಕೆ ತೀರ್ಥಪುರದ ಪ್ರಾಥಮಿಕ ಆರೋಗ್ಯ ಘಟಕಕ್ಕೆ ವರ್ಗಾವಣೆಯಾದಂತೆ ತೋರಿಸಿರುತ್ತಾರೆ. ಈ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳುವಿರಾ? ಗುಡ್ಡಗಾಡು ಪ್ರದೇಶದಲ್ಲಿರುವ ಈ ಆಸ್ಪತ್ರೆಗೆ ರಾಜಕಾರಣ ಮಾಡುವುದನ್ನು ಬಿಟ್ಟು ಯಾರಾದರೊಬ್ಬ ವೈದ್ಯಾಧಿಕಾರಿಯನ್ನು ನೇಮಿಸುವಿರಾ? ಹಾಗಿದ್ದಲ್ಲಿ , ಸುಮಾರು ಯಾವ ಕಾಲಕ್ಕೆ ಅಲ್ಲಿನ ಜನತೆ ವೈದ್ಯಕೀಯ ಸೇವೆಗೆ ಅರ್ಹರಾಗಬಹುದೆಂದು ತಿಳಿಸುವಿರಾ. ಹಾಗೂ ಪ್ರಾಥಮಿಕ ಆರೋಗ್ಯ ಘಟಕ ಆರಂಭವಾದಂದಿನಿಂದ ಇಲ್ಲಿಯವರೆವಿಗೂ ಎಷ್ಟು ದಿನ (ಆರಂಭದ ತಾರೀಖು ನೀಡುವುದು) ಅಲ್ಲಿ ವೈದ್ಯಾಧಿಕಾರಿಗಳು ಕೆಲಸ ಮಾಡಿರುವರೆಂಬುದನ್ನು ತಿಳಿಸಿಕೊಡಬೇಕೆಂದು ಸನಾನ್ಯ ಆರೋಗ್ಯ ಸಚಿವರನ್ನು ಕೋರುತ್ತೇನೆ.

(ಆರೋಗ್ಯ ಸಚಿವರ ಪರವಾಗಿ)

ಶ್ರೀ ಬ್ಲೇಸಿಯಸ್ ಎಂ. ಡಿಸೋಜ(ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೆ ''ಸರ್ಕಾರಿ ಆದೇಶ ಸಂಖ್ಯೆ ಆಕುಕ 213 ಸಿಜಿವಿಂ ದಿಃ 29-12-80ರಲ್ಲಿ ಚಿಕ್ಕನಾಯಕನ ಹಳ್ಳಿ ತಾಲ್ಲೂಕು ತೀರ್ಥಪುರಕ್ಕೆ ಒಂದು ಪ್ರಾಥಮಿಕ ಆರೋಗ್ಯ ಘಟಕ ಮಂಜೂರಾಗಿರುತ್ತದೆ. ಈ ಆಸ್ಪತ್ರೆಯು ದಿಃ12-1-91ರಂದು ಕಾರ್ಯ ಆರಂಭವಾಗಿರುತ್ತದೆ. ಪ್ರಾರಂಭವಾದ ನಂತರ ಈ ಕೆಳಗೆ ನಮೂದಿಸಿರುವ ವೈದ್ಯಾಧಿಕಾರಿಗಳು ಆರೋಗ್ಯ ಘಟಕದಲ್ಲಿ ಕೆಲಸ ನಿರ್ವಹಿಸಿರುತ್ತಾರೆ. ಡಾ॥ ಎನ್. ಪ್ರಸಾದ್, ವೈದ್ಯಾಧಿಕಾರಿಗಳು ಇವರು ದಿ : 12-1-81ರಿಂದ 23-3-82ರವರೆಗೆ ಈ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ಈ ವೈದ್ಯರು ವರ್ಗಾವಣೆ ಆದ ನಂತರ ಸ್ಥಳೀಯ ಅಭ್ಯರ್ಥಿಯಾದ ಡಾ॥ ಕೆ. ಪಿ. ಶಂಕರ್ ಇವರನ್ನು ಈ ಆಸ್ಪತ್ರೆಗೆ ನೇಮಿಸಿದ್ದು ಇವರು ದಿಃ6-11-82ರಂದು ಕಾರ್ಯನಿರ್ವಹಿಸಿರುತ್ತಾರೆ. ತದನಂತರ ಡಾ॥ ನಟರಾಜಮೂರ್ತಿ ಇವರು ದಿನಾಂಕ 13-7-87ರಿಂದ 16-8-90ರವರೆಗೆ ಕಾರ್ಯ ನಿರ್ವಹಿಸಿರುತ್ತಾರೆ. ಇವರ ವರ್ಗಾವಣೆ

ನಂತರ ಮೇಲ್ಕಂಡ ಆಸ್ಪತ್ರೆಗೆ ಡಾ॥ ಪ್ರಭಾಕರ್ ರೇವಣ್ಣ ಇವರನ್ನು ದಿನಾಂಕ 3-5-91ರಂದು ನೇಮಕ ಮಾಡಲಾಗಿತ್ತು. ಆದರೆ ಇವರು ಅಲ್ಲಿ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಆನಂತರ ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಡಾ॥ ನಗರುಳ್ಳ ಇವರನ್ನು ಮೇಲ್ಕಂಡ ಆಸ್ಪತ್ರೆಗೆ ದಿನಾಂಕ 29-6-91ರಂದು ನೇಮಕ ಮಾಡಲಾಗಿತ್ತು. ಇವರೂ ಸಹ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಆದ್ದರಿಂದ ಡಾ॥ವೀರಪ್ಪನಂದಿಹಳ್ಳಿ ಎಂಬ ವೈದ್ಯರನ್ನು ಈ ಆಸ್ಪತ್ರೆಗೆ ನೇಮಕ ಮಾಡಿದ್ದು, ಇವರು ದಿನಾಂಕ 3-3-92ರಂದು ಮೇಲ್ಕಂಡ ಆಸ್ಪತ್ರೆಯಲ್ಲಿ ಹಾಜರಾಗಿ ದಿನಾಂಕ 25-3-92ರಿಂದ 23-4-92ರ ವರೆಗೆ ರಜೆ ಮಂಜೂರಾತಿ ಕೋರಿ ರಜೆಯ ಮೇಲೆ ಹೋದವರು ಇಂದಿನವರೆಗೂ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಅಂದಿನಿಂದ ಈ ಆಸ್ಪತ್ರೆಯಲ್ಲಿ ವೈದ್ಯರ ಹುದ್ದೆ ಖಾಲಿ ಇರುತ್ತದೆ. ಗೈರುಹಾಜರಾಗಿರುವ ವೈದ್ಯಾಧಿಕಾರಿಗಳ ವಿರುದ್ಧ ಕೂಡಲೇ ಶಿಸ್ತುಕ್ರಮವನ್ನು ಕೈಗೊಳ್ಳಲಾಗುವುದು. ತೀರ್ಥಪುರ, ಪ್ರಾಥಮಿಕ ಆರೋಗ್ಯಘಟಕಕ್ಕೆ ಈ ತಿಂಗಳ ಅಂತ್ಯದೊಳಗೆ ಒಬ್ಬ ಗುತ್ತಿಗೆ ವೈದ್ಯರನ್ನಾಗಲಿ ಅಥವಾ ಈ ತಿಂಗಳಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ಪೂರೈಸಿ ವಾಪಸ್ಸು ಬರುವ ವೈದ್ಯಾಧಿಕಾರಿಗಳಲ್ಲೊಬ್ಬರನ್ನು ತಪ್ಪದೆ ನೇಮಕ ಮಾಡಲಾಗುವುದು. ಈಗ ತಿಮ್ಮನಹಳ್ಳಿಯ ವೈದ್ಯಾಧಿಕಾರಿಗಳು ತೀರ್ಥಪುರ ಪ್ರಾಥಮಿಕ ಆರೋಗ್ಯ ಘಟಕದ ಪ್ರಬಾರೆಯಲ್ಲಿರುತ್ತಾರೆ.

<u>ಶಾಸನ ರಚನಾ ಕಾರ್ಯ ಕಲಾಪಗಳು</u>

<u>1993ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ಮಂಡನೆಗೆ ಅನುಮತಿ ಕೋರಿಕೆ ವಿಧೇಯಕ.</u>

ಶ್ರೀ ಚೌಡರೆಡ್ಡಿ : (ನಗರಾಭಿವೃದ್ಧಿ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ''1993ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.''

ಛೇರ್ಮನ್ : ಪ್ರಸ್ತಾವ ಏನೆಂದರೆ '' 1993ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು</u>

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ''1993ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.''

ಛೇರ್ಮನ್ : ವಿಧೇಯಕವನ್ನು ಮಂಡಿಸಲಾಗಿದೆ.

<u>1993ರ ಕರ್ನಾಟಕ ಮಿನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ</u>